ಒ ಎಸ್ 458/2006
ಡಿ ಡಬ್ಲ್ಯೂ 3

ದಿಃ 06-01-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ನಾನು ಸಲ್ಲಿಸಿದ ಅಫೀಡವೀಟ್ ಬಗ್ಗೆ ನನಗೆ ಗೊತ್ತು. ಅದನ್ನು ಬರೆಯಲು ನಾನೇ ಮಾಹಿತಿ ಕೊಟ್ಟದ್ದೇನೆ. ಈ ದಾವೆಯ ವಾದಿಯರು ಮತ್ತು ಪ್ರತಿವಾದಿಯರು ನನಗೆ ಗೊತ್ತು. ದಾವಾ ಸರ್ವೆ ನಂ. 24/1. ದಾವಾ ಆಸ್ತಿ ಏಕತ್ರ ಕುಟುಂಬದ ಆಸ್ತಿ ಎಂದರೆ ಸರಿ ವಾದಿ ಮತ್ತು ಪ್ರತಿವಾದಿಯರು ಬೇರೆ ಬೇರೆಯಾಗಿದ್ದಾರೆ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಪಾಲು ಆಗಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಸಿದ್ದಪ್ಪ ಇವರು ಏಕತ್ರ ಕುಟುಂಬದ ಕರ್ತ ಇದ್ದರು ಎಂದರೆ ಸುಳ್ಳು. 7 ನೇ ಪ್ರತಿವಾದಿ ಮತ್ತು ವಾದಿಗೆ ಮನಸಾ ಮನಸಾ ಸರಿ ಇಲ್ಲ ಎಂದರೆ ಸುಳ್ಳು. ಮಲ್ಲಾಪೂರ ಪಿ.ಜಿ ಯಿಂದ ಪಾಮಲದಿನ್ನಿಗೆ 5 ಕಿ.ಮೀ ದೂರ ಇದೆ. ನಾನು ಪಾಮಲದಿನ್ನಿಗೆ ಹೋಗುವ ಪ್ರಸಂಗ ಇಲ್ಲ ಎಂದರೆ ಸುಳ್ಳು. 1 ಮತ್ತು 7 ನೇ ಪ್ರತಿವಾದಿ ಅವರು 40 ವರ್ಷಗಳ ಹಿಂದೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಜರಿದ್ದೆನು. 1ನೇ ಪ್ರತಿವಾದಿ ಬೇರೆಯಾದ ನಂತರ ಆತನ ಹೆಂಡತಿ 2 ನೇ ಪ್ರತಿವಾದಿ ಆತನನ್ನು ಬಿಟ್ಟು ಹೋಗಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ಅವನ ಹೆಂಡತಿ ಮಕ್ಕಳು ಕೂಡಿಯೇ ಇದ್ದಾರೆ ಮತ್ತು ಅವರು ಒಟ್ಟಿಗೆ ಸಾಗುವಳಿ ಮಾಡುತ್ತಾರೆಂದರೆ ಸುಳ್ಳು. ಪ್ರತಿವಾದಿಯರ ಆರೋಗ್ಯ ಸರಿಯಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಜಮೀನಿನ 1 ಎಕರೆ 15 ಗುಂಟೆಯನ್ನು
ಭೀಮಪ್ಪಾ ಹೂಲಿಕಟ್ಟಿ ಇವರಿಗೆ ಮಾರಾಟ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸದರಿ ಖರೀದಿ ಪತ್ರವನ್ನು ನೋಡಿದ್ದೇನೆ. ಭೀಮಪ್ಪಾ ಹೂಲಿಕಟ್ಟಿ ಇವರು ಕಬ್ಜಾದಲ್ಲಿಲ್ಲ ಎಂದರೆ ಸುಳ್ಳು. 1ನೇ ಪ್ರತಿವಾದಿಯು 7 ನೇ ಪ್ರತಿವಾದಿಯಿಂದ 2000 ನೇ ಇಸವಿಯಲ್ಲಿ 1,00,000/- ಸಾಲ ಪಡೆದುಕೊಂಡು ಮರು ಪಾವತಿ ಮಾಡಲು ಆಗದದ್ದರಿಂದ ತನ್ನ ಪಾಲಿನ ಉಳಿದ 37 ಗುಂಟೆಯನ್ನು 8 ರಿಂದ 11 ನೇ ಪ್ರತಿವಾದಿಯವರಿಗೆ ಬಿಟ್ಟು ಕೊಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಬಿಟ್ಟುಕೊಟ್ಟ ಪತ್ರ ನೊಂದಣಿ ಆಗಿಲ್ಲ. ನಾನು ಆ ಪತ್ರಕ್ಕೆ ಸಹಿ ಮಾಡಿಲ್ಲ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಯರು ಮತ್ತು 7 ರಿಂದ 11 ನೇ ಪ್ರತಿವಾದಿಯರು ಒಟ್ಟಿಗೆ ಕಬ್ಜಾದಲ್ಲಿದ್ದು ಸಾಗುವಳಿ ಮಾಡುತ್ತಾರೆಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿ 2 ರಿಂದ 6 ಇವರು 30 ವರ್ಷಗಳ ಹಿಂದೆ 1 ನೇ ಪ್ರತಿವಾದಿ ಮನೆಯನ್ನು ಬಿಟ್ಟು ಹೋಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 7 ರಿಂದ 11 ನೇ ಪ್ರತಿವಾದಿಯರ ಮಾತು ಕೇಳಿ 2 ರಿಂದ 6 ಪ್ರತಿವಾದಿಯರು ಮತ್ತು ವಾದಿಗೆ ತೊಂದರೆ ಆಗುವಂತೆ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಗೋಕಾಕ